# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.969/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರಮೇಶ್ ಪಿ.ಎಸ್ | CW: 1 | PW: 1 |
| ತಂದೆಯ ಹೆಸರು | : | ಸಿದ್ದಲಿಂಗಪ್ಪ ಪಿ.ಆರ್ | | |
| ವಯಸ್ಸು | : | 34 | | |
| ವೃತ್ತಿ | : | ಪಿಎಸ್ ಐ, ರಟ್ಟಿಹಳ್ಳಿ ಪೊಲೀಸ್ ಠಾಣೆ | | |
| ವಾಸಸ್ಥಳ | : | ರಟ್ಟಿಹಳ್ಳಿ, ಹಾವೇರಿ ಜಿಲ್ಲೆ | | |

ದಿನಾಂಕಃ 09.07.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು ದಿಃ 18.11.2020 ರಿಂದ ದಿಃ 12.08.2023 ರವರೆಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.07.2023 ರಂದು ನಾನು ಠಾಣಾ ವ್ಯಾಪ್ತಿಯ ಗಸ್ತಿನಲ್ಲಿದ್ದಾಗ ಸಂಜೆ 6.15 ಗಂಟೆ ಸಮಯದಲ್ಲಿ ಹೊಸಜೋಗ ಗ್ರಾಮದ ಚೈತನ್ಯ ನಾಯ್ಕ ತಂದೆ ಹನುಮಂತನಾಯ್ಕ ಎಂಬುವವರು ತಮ್ಮ ಮನೆಯ ಮುಂದೆ ಸಾರ್ವಜನಿಕ ಸ್ಥಳದಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ಸ್ವಯಃ ದೂರನ್ನು ದಾಖಲಿಸಿ, ಠಾಣೆಗೆ ಚಾಸಾ 2 ಮತ್ತು 3 ರವರನ್ನು ಚಾಸಾ 4 ರವರ ಮೂಲಕ ಪಂಚರಾಗಿ ಬರಮಾಡಿಕೊಂಡು ಅವರಿಗೆ ಪ್ರಕರಣ ಮಾಹಿತಿ

ನೀಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು ಅವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಅವರನ್ನು ಹೊಸಜೋಗ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು ಸಂಜೆ 6.45 ರ ಸಮಯದಲ್ಲಿ ಸದರಿ ಗ್ರಾಮಕ್ಕೆ ತಲುಪಿ ಜೀಪನ್ನು ಆರೋಪಿತನ ಮನೆಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾನು, ಚಾಸಾ 2, 3 ಮತ್ತು ನಮ್ಮ ಸಿಬ್ಬಂದಯವರು ಆರೋಪಿತರನ ಹತ್ತಿರ ಹೋಗುತ್ತಿದ್ದರಿಂದ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆತನು ತಪ್ಪಿಸಿಕೊಂಡು ಓಡಿಹೋಗಿರುತ್ತಾನೆ . ಸಿಬ್ಬಂದಿಯವರು ಹಿಡಿಯಲು ಪ್ರಯತ್ನ ಪಟ್ಟರೂ ಸಿಕ್ಕಿರುವುದಿಲ್ಲ.

ಸ್ಥಳದಲ್ಲಿ ಪರಿಶೀಲನೆ ಮಾಡಲಾಗಿ 90 ಎಂ ಎಲ್ ನ ಓರಿಜಿನಲ್ ಚಾಯ್ಸ್ ವಿಸ್ಕಿಯ 40 ಮಧ್ಯದ ಪೌಚ್ ಗಳು ಸಿಕ್ಕಿರುತ್ತವೆ. ಅವುಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಅಮಾನತ್ತುಪಂಚನಾಮೆ ಜರುಗಿಸಿ ಸದರಿ ಮಧ್ಯದ ಪೌಚ್ ಗಳು ಖಾಕಿ ಬಣ್ಣದ ರಟ್ಟಿನ ಬಾಕ್ಸ್ ನಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ದಾರದಿಂದ ಹೊಲೆದು ಎನ್.ಎಂ.ಟಿ ಎಂದು ಅರಗು ಸೀಲ್ ಹಾಕಿ ನನ್ನ ಹಾಗೂ ಪಂಚರ ಸಹಿಗಳಿರುವ ಚೀಟಿಯನ್ನು ಅದಕ್ಕೆ ಅಂಟಿಸಿರುತ್ತೇವೆ. ಸದರಿ ಪಂಚನಾಮೆಯನ್ನು ಸಂಜೆ 7.00 ರಿಂದ 8.15 ರವರೆಗೆ ಜರುಗಿಸಿ, ನಂತರ ಸದರಿ ಮಧ್ಯದ ಪೌಚ್ ಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಮಧ್ಯದ ಪೌಚ್‌ಗಳನ್ನು ಹಾಗೂ ಅಮಾನತ್ತುಪಂಚನಾಮೆಯನ್ನು ಚಾಸಾ 9 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮಧ್ಯದ ಪೌಚ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 1 ಎಂದು ಗುರುತಿಸಲಾಯಿತು.

ಸಾಕ್ಷಿಯು ದೂರನ್ನು ಹಾಗೂ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿ ಪರ  ವಕೀಲರಿಂದಃ-</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸೂಕ್ತ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.